ಭಾರವಾಗದಂತೆ ಎಲ್ಲ ನಿಗಾ ವಹಿಸಿದಳು. ಕುಡಿಯುವ ಹಾಗು ಬಳಕೆಯ ನೀರನ್ನು ಶೆಟ್ಟರ ಬಾವಿಯಿಂದ ಸೇದಿ ಹೊತ್ತು ತರಬೇಕು. ಬೇಡವೆಂದರೂ ಅತ್ತಿಗೆಯೂ ಕೂಡ ಕೊಡ ಹೊತ್ತು ಬಂದಳು. ಶ್ರಮದ ಮಧ್ಯದ ಪ್ರೀತಿ, ಸಂಬಂಧಗಳನ್ನು ಇನ್ನೂ ಗಟ್ಟಿ ಮಾಡುತ್ತಾ ಹೋಯಿತು. ಎಲ್ಲಿ ಆಕೆಗೆ ಶ್ರಮದ ಭಾರ ಹೆಚ್ಚಾಯ್ತೊ ಎನ್ನುವ ಕೊರಗು ಹಾಗು ಪರಸ್ಪರ ಹೊಂದಾಣಿಕೆಗಳು, ಸಂಬಂಧಗಳನ್ನು ಇನ್ನಷ್ಟು ಗಟ್ಟಿಯಾಗುವಂತೆ ಮಾಡಿದವು. ಬರಬರುತ್ತಾ ಅತ್ತಿಗೆ ಹಿರಿಯ ಅಕ್ಕನಾಗಿ ಕಾಣ ಹತ್ತಿದಳು. ಈ ರೂಪಾಂತರ ಮನೆಯ ಆಂತರಿಕ ಚೈತನ್ಯ ಹೆಚ್ಚಿಸಿತು.

ಕೆಲವು ಸಮಯದ ನಂತರ ಅಣ್ಣನಿಗೆ ನೌಕರಿಯಾಗಿ ಪರ ಊರು ಸೇರಿದ. ಅತ್ತಿಗೆಯೂ ಹೊರಟು ಹೋದಳು. ಅಣ್ಣ ಬರು ಹೋಗುವುದು ಕಡಿಮೆಯಾಯ್ತು. ಅದು ಹುಟ್ಟುಹಾಕಿದ ಶೂನ್ಯ ಒಂದೊಮ್ಮೆ ವೈರಾಗ್ಯಕ್ಕೆ ತಳ್ಳುತ್ತಿತ್ತು. ಮನೆಯಲ್ಲಿ ನಡೆಯುವ ಎಲ್ಲ ಕಾರ್ಯಗಳಿಗೂ ಊರಲ್ಲಿ ನಡೆಯುವ ಎಲ್ಲ ಉತ್ಸವಗಳಿಗೂ ಮಹತ್ವದವೆನ್ನುವ ಸಮಾರಂಭಗಳಿಗೂ ಬರಲಾಗಲಿಲ್ಲ. ಯಾವುದಾದರೂ ನಿಮಿತ್ತ ಅಣ್ಣ ಬಂದು ಹೋದಾನೆನ್ನುವ ಭರವಸೆ ಕಡಿಮೆಯಾಗಹತ್ತಿತು. ನಡೆಯುವುದೆಲ್ಲವೂ ನಡೆಯುತ್ತಿತ್ತು. ಆದರೆ ಅಣ್ಣ ಬರುತ್ತಿರಲಿಲ್ಲ. ಅಣ್ಣನ ನೆನಪು ಬಂದುಹೋಗುತ್ತಿತ್ತು. ಇರುವವರು ಎಲ್ಲೆಲ್ಲಿ ಇರುವರೋ, ಅಲ್ಲಿಯೇ ವಯಸ್ಸು ಕೂಡ ಆಗುತ್ತ ಹೋಗುತ್ತದೆ. ಮನಸ್ಸಿನ ಆಶೆ ಆಕಾಂಕ್ಷೆಗಳಿಗೆ ವಯಸ್ಸು ಲಕ್ಷ್ಯ ಕೊಡಲಾರದು. ಅದು ಗಳಿಗೆ, ತಾಸು, ದಿನ, ವರ್ಷಗಳ ಲೆಕ್ಕದಲ್ಲಿ ಸಾಗುತ್ತಲೇ ಹೋಗುತ್ತದೆ. ಅದೊಂದು ರೀತಿಯ ಕುರುಡನ ಪಯಣ. ಜಡೆಗೆ ಹಾಕಿದ ಬಣ್ಣದ ರಿಬ್ಬನ್ನಿನ ಗಂಟು ಸಡಿಲಾದಂತೆ, ರಿಬ್ಬನ್ನಿನ ಬಣ್ಣ ಮಾಸಿದಂತೆ, ತಲೆಯ ಮೇಲಿನ ರುಮಾಲಿನ ಜರಿ ಕೀಳಹತ್ತಿದಂತೆ, ಕಪ್ಪು ಕೂದಲು ಬಿಳಿಯಾಗುತ್ತಿದ್ದಂತೆ, ದೇಹವೂ ಕುಗ್ಗುತ್ತಾ ಹೋಗುತ್ತದೆ. ಅಣ್ಣನಿಗೆ, ಅತ್ತಿಗೆಗೆ ಸಂಸಾರದ ಭಾರ ಹೆಚ್ಚಾದಂತೆ, ಅಣ್ಣತಂಗಿಯರ ಮಧ್ಯದ ಬದುಕು ರೈಲು ನಿಲ್ದಾಣದಲ್ಲಿ ಭೇಟಿಯಾದ ಬೇರೆ ಬೇರೆ ದಿಕ್ಕುಗಳ ಪ್ರಯಾಣಿಕರಂತಾಗುತ್ತದೆ. ಊರಿಗೆ ಬಂದ ಎನ್ನುವುದರಲ್ಲಿ, ಬಂದು ಹೋಗಿರುತ್ತಿದ್ದ. ಒಂದೆರಡು ತಾಸು ಕೂತು ಮಾತನಾಡುವ ವ್ಯವಧಾನವೂ ಇರಲಿಲ್ಲ. ಅವರವರ ಬದುಕಿಗೆ ಎಲ್ಲವೂ ಸರಿಯಾಗಿದ್ದರೂ ಕೂಡ, ಕಾಗೆ–ಗುಬ್ಬಿ–ಗಿಳಿ–ಪಾರಿವಾಳಗಳು ಗುಂಪಾಗಿ ಕುಳಿತು ಸಂಭಾಷಿಸುವಂತಹ ಅವಕಾಶವಿರಲಿಲ್ಲ. ಅಂಗಿ, ಗಗ್ಗರಿಯ ಚುಂಗು ಹಿಡಿದು ಚುಕುಬುಕು ಎಂದು ಪ್ರಾರಂಭವಾಗುವ ಬಾಲ್ಯದ ನಿಧಾನದ ರೈಲು, ಸ್ವಲ್ಪೇ ದಿನಗಳಲ್ಲಿ ಹಾರಾಡುವ ವಿಮಾನವಾಗಿ ದೂರಕ್ಕೆ ಹಾರಿಹೋಗುತ್ತದೆ ಎನ್ನುವ ಸುಳಿವು ಆಗ್ಗೆ ಇರಲಿಲ್ಲ.

ಆಕೆ ಅಣ್ಣನಿಗಾಗಿ ಆಶೆ ಪಟ್ಟದ್ದು ಅಷ್ಟಿಷ್ಟಲ್ಲ. ಭೂಮಿಯು ನೀರಿಗಾಗಿ ಹಂಬಲಿಸಿದಂತೆ ಅಣ್ಣನ ಬರುವಿಕೆಗಾಗಿ ಕಾಯುತ್ತಿದ್ದಳು. ಒಮ್ಮೊಮ್ಮೆ ಬೆಳಗಿನ ಜಾವ ಅಣ್ಣ ಬಂದ ಎಂದು ಎಚ್ಚರಗೊಂಡು ಹೊಸ್ತಿಲಿಗೆ ಬಂದಿದ್ದು ಇದೆ. ಬೆಳಗಿನ ಕನಸುಗಳು ಅಣ್ಣನ ಬಣ್ಣಬಣ್ಣದ ಚಿತ್ರಗಳನ್ನೇ ಹೊತ್ತು ತರುತ್ತಿದ್ದವು.

ಆಕೆ ತೀರಿಕೊಂಡ ದಿನ, ಅಣ್ಣನ ಹೆಂಡತಿ ದುಃಖಿಸುತ್ತಾ ನೆನಪಿಸಿಕೊಂಡದ್ದು, ತಾನು ಮಗು ಹೆತ್ತಾಗ; ಬೆಳ್ಳಿಬಟ್ಟಲು, ಬಂಗಾರದ ಚೈನು, ಕೈಕಟ್ಟು, ಹೊಸ ತೊಟ್ಟಿಲು ಹೊತ್ತುಕೊಂಡು ಆಕೆ ಹೊಸ್ತಿಲು ಬಳಿ ಬಂದು ನಿಂತದ್ದನ್ನು ಹಾಗು ಮಗುವಿನ ಮುಖವನ್ನು ನೋಡಬೇಕೆನ್ನುವ ಆಕೆಯ ಎಗ್ಗಿಲ್ಲದ ಆತುರವನ್ನು.

***